# ಕೃಷಿ ವಿಶ್ವವಿದ್ಯಾಲಯ, ಧಾರವಾಡ
# ಐ. ಸಿ. ಎ. ಆರ್.- ಕೃಷಿ ವಿಜ್ಞಾನ ಕೇಂದ್ರ
ಹನುಮನಮಟ್ಟಿ - 581115 ಜಿ: ಹಾವೇರಿ

ವಾರ್ತಾ ಪತ್ರ

ಸಂಪುಟ: 14 ಸಂಚಿಕೆ: 3 ಜುಲೈ – ಸೆಪ್ಟೆಂಬರ್, 2016


## ಗಣ್ಯರ ಭೇಟಿ



ದಿ. 27.08.16 ರಂದು ಹನುಮನಮಟ್ಟಿಯ ಪ್ರೌಢಶಾಲೆಗೆ ಆಗಮಿಸಿದ ಮಾನ್ಯ ಸಂಸದರು ಹಾಗೂ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆಯವರು ಶಾಲೆಯಲ್ಲಿ ನಿರ್ಮಾಣ ಮಾಡಿದ ಪೌಷ್ಟಿಕ ಕೈತೋಟಕ್ಕೆ ಸಹ ಭೇಟಿ ನೀಡಿ, ಮೆಚ್ಚುಗೆ ಸೂಸಿದರು ಹಾಗೂ ಶಾಲಾ ಮಕ್ಕಳಲ್ಲಿ ಶ್ರಮದಾಯಕ ಕೆಲಸಗಳಲ್ಲಿ ಆಸಕ್ತಿ ಹುಟ್ಟಿಸುವುದು ಅವಶ್ಯವಿದ್ದು, ಈ ದಿಶೆಯಲ್ಲಿ ಕೃಷಿ ವಿಜ್ಞಾನ ಕೇಂದ್ರ ಸಿಬ್ಬಂದಿ ಅಭಿನಂದನಾರ್ಹರು ಎಂದು ಸೂಚಿಸಿದರು.



ಈ ಸಂದರ್ಭದಲ್ಲಿ ಕೃಷಿ ವಸ್ತು ಪ್ರದರ್ಶನವನ್ನು ಕೂಡ ಏರ್ಪಡಿಸಲಾಗಿತ್ತು. ಕೇಂದ್ರದ ಕಾರ್ಯಕ್ರಮ ಸಂಯೋಜಕರಾದ ಡಾ. ಸರೋಜನಿ ಕರಕಣ್ಣನವರ ಇವರು ಸಭಿಕರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿ ಕಾರ್ಯಕ್ರಮದ ವಿವರ ನೀಡಿದರು. ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಸುಮಾರು 275 ಕ್ಕೂ ಹೆಚ್ಚು ರೈತರು/ರೈತ ಮಹಿಳೆಯರು ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಿ: 10.09.2016 ರಂದು ಕೇಂದ್ರಕ್ಕೆ ಅಟಾರಿ, ಬೆಂಗಳೂರಿನ ವಲಯ ನಿರ್ದೇಶಕರಾದ ಡಾ. ಶ್ರೀನಾಥ ದೀಕ್ಷಿತರವರು ಭೇಟಿ ನೀಡಿದರು. ಕೇಂದ್ರದ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಿ, ಕೈಗೊಂಡಿರುವ ಕಾರ್ಯಕ್ರಮಗಳ ಕುರಿತು ಸಮಾಲೋಚನೆ ನಡೆಸಿ ಸೂಕ್ತ ಸಲಹೆಗಳನ್ನು ನೀಡಿದರು.

## ಕೃಷಿ ಮೇಳ–೨೦೧೬ದಲ್ಲಿ – ರೈತ ಮತ್ತು ರೈತ ಮಹಿಳೆಯರ ಸಾಧನೆಗೆ ಸಂದ ಗೌರವ

ದಿನಾಂಕ 24.09.2016 ರಿಂದ 27.09.2016ರ ವರೆಗೆ ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಆಯೋಜಿಸಲಾಗಿದ್ದ ಕೃಷಿ ಮೇಳ–2016 ರಲ್ಲಿ ಉತ್ತರ ಕರ್ನಾಟಕದ 7 ಜಿಲ್ಲೆಗಳ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರಿಗೆ "ಶ್ರೇಷ್ಠ ಕೃಷಿಕ " ಮತ್ತು "ಶ್ರೇಷ್ಠ ಕೃಷಿ ಮಹಿಳೆ" ಹಾಗೂ ವಿವಿಧ ತಾಲ್ಲೂಕುಗಳಿಂದ ಆಯ್ಕೆಯಾದ ಶ್ರೇಷ್ಠ ಯುವ ಕೃಷಿಕ ಮತ್ತು ಶ್ರೇಷ್ಠ ಯುವ ಕೃಷಿ ಮಹಿಳೆಯರಿಗೆ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

### ಶ್ರೇಷ್ಠ ಕೃಷಿಕ



ಶ್ರೀ ಬಾಷಾಸಾಬ ಹುಸೇನಸಾಬ ದೊಡ್ಡಮನಿ
ಸಾ. ಖುರ್ದಕೋಡಿಹಳ್ಳಿ ತಾ: ಬ್ಯಾಡಗಿ

### ಶ್ರೇಷ್ಠ ಕೃಷಿ ಮಹಿಳೆ



ಶ್ರೀಮತಿ ನೀಲಮ್ಮಾ ಹುಚ್ಚಪ್ಪ ಅಂತರವಳ್ಳಿ
ಮೆಡ್ಲೇರಿ, ರಾಣೇಬೆನ್ನೂರು

### ಶ್ರೇಷ್ಠ ಯುವ ಕೃಷಿಕರು



ಅಶೋಕ ಶಿದ್ದಪ್ಪ ಯಮನೂರ
ಸಾ:ಹಿರೇಬಾಸೂರ, ತಾ: ಹಾನಗಲ್ಲ



ಅಶೋಕ ಸಹದೇವಪ್ಪ ಕಬನೂರ
ಸಾ: ಶಿಗ್ಗಾಂವ, ತಾ: ಶಿಗ್ಗಾಂವ



ಗಣೇಶ ಬಸವರಾಜ ಬಣಕಾರ
ಸಾ:ಗುಮ್ಮನಹಳ್ಳಿ, ತಾ: ಬ್ಯಾಡಗಿ



ಶಾಂತಪ್ಪ ಮಲ್ಲಪ್ಪ ಮುಗದೂರ
ಸಾ: ಕೆರೆಮತ್ತಿಹಳ್ಳಿ, ತಾ: ಹಾವೇರಿ



ರುದ್ರೇಶ ಗುಡ್ಡಪ್ಪ ಹಿತ್ತಲಮನಿ
ಸಾ: ಇಟಗಿ, ತಾ: ರಾಣೇಬೆನ್ನೂರ



ರಾಮನಗೌಡ ಸಣ್ಣಗೌಡ ಪಾಟೀಲ
ಸಾ: ಕೋಡ, ತಾ: ಹಿರೇಕೆರೂರ

### ಶ್ರೇಷ್ಠ ಯುವ ಕೃಷಿ ಮಹಿಳೆಯರು



ಲಕ್ಷ್ಮಿ ಮಾಲತೇಶ ಕಮ್ಮೂರ
ಸಾ: ಬಾಡ ತಾ: ಶಿಗ್ಗಾಂವ



ನಿರ್ಮಲಾ ಅಣ್ಣಪ್ಪ ಕ್ಯಾತಪ್ಪನವರ
ಸಾ: ವರ್ದಿ, ತಾ: ಹಾನಗಲ್ಲ



ಕಸ್ತೂರಿ ಮಾ. ಹೊನ್ನಕೇರಿ
ಸಾ: ಖುರ್ದಕೋಡಿಹಳ್ಳಿ ತಾ: ಬ್ಯಾಡಗಿ



ಕವಿತಾ ಶಿವಾನಂದ ವರ್ದಿ
ಸಾ: ಕೆಳಮತ್ತಿಹಳ್ಳಿ ತಾ: ಹಾವೇರಿ



ಸರೋಜಾ ಮಲ್ಲಿಕಾರ್ಜುನ ನೆಗಳೂರ
ಸಾ: ಅಸುಂಡಿ ತಾ: ರಾಣೇಬೆನ್ನೂರ



ರತ್ನಾ ಮಲ್ಲಯ್ಯ ಮತ್ತೂರಮಠ
ಸಾ: ಜೇಕಿನಕಟ್ಟಿ ತಾ: ಸವಣೂರ



ರೇಣುಕಾ ಕಲ್ಲಪ್ಪ ಕುರಿಯವರ
ಸಾ: ನಿಡನೇಗಿಲ, ತಾ: ಹಿರೇಕೆರೂರು

## “ರೈತ ಮತ್ತು ಬ್ಯಾಂಕ್ ಅಧಿಕಾರಿಗಳ ಮುಖಾಮುಖಿ ಸಭೆ”



ದಿನಾಂಕ: 18.07.2016 ರಂದು “ರೈತ ಮತ್ತು ಬ್ಯಾಂಕ್ ಅಧಿಕಾರಿಗಳ ಮುಖಾಮುಖಿ ಸಭೆ” ಯನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಎನ್. ಕದರಪ್ಪ, ಮುಖ್ಯ ವ್ಯವಸ್ಥಾಪಕರು, ಲೀಡ್ ಬ್ಯಾಂಕ, ಹಾವೇರಿ ಇವರು ಎಲ್ಲಾ ಬ್ಯಾಂಕ್‌ಗಳಲ್ಲಿ ರೈತರಿಗಾಗಿ ಇರುವ ವಿವಿಧ ಯೋಜನೆಗಳನ್ನು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಉಮೇಶ ಬಾಬು, ವ್ಯವಸ್ಥಾಪಕರು, ಲೀಡ್ ಬ್ಯಾಂಕ, ಹಾವೇರಿ ಮತ್ತು ಶ್ರೀ ಎಮ್. ಎನ್. ವಿದ್ಯಾಗಣೇಶ, ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು, ನಬಾರ್ಡ, ಹಾವೇರಿ ಇವರು ರೈತರಿಗಾಗಿ ಇರುವ ವಿವಿಧ ಸಬ್ಸಿಡಿ ಯೋಜನೆಗಳ ಬಗ್ಗೆ ವಿವರಿಸಿದರು. ಶ್ರೀಮತಿ ವಿಜಯಲಕ್ಷ್ಮಿ, ಪ್ರಭಾರಿ ಉಪ ನಿರ್ದೇಶಕರು ತೋಟಗಾರಿಕೆ, ಹಾವೇರಿ ಇವರು ತೋಟಗಾರಿಕಾ ಬೆಳೆಗಳಲ್ಲಿ ದೊರೆಯುವ ವಿಮಾ ಯೋಜನೆಯನ್ನು ವಿವರಿಸಿದರು. ಕೃಷಿ ವಿಜ್ಞಾನ ಕೇಂದ್ರ, ಕೃಷಿ ಮಹಾವಿದ್ಯಾಲಯ ಹಾಗೂ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಗೋವಿನ ಜೋಳದ ಬೆಳೆಯಲ್ಲಿ ರಂಜಕ ಮತ್ತು ಸತುವಿನ ಕೊರತೆ ಲಕ್ಷಣ ಹಾಗೂ ನಿರ್ವಹಣೆ



ಜುಲೈ ತಿಂಗಳಲ್ಲಿ ಗೋವಿನ ಜೋಳದಲ್ಲಿ ಎಲೆಗಳು ಕೆಂಪಾಗಿ ರಂಜಕದ ಕೊರತೆಯಾಗಿದ್ದು, ಜೊತೆಗೆ ಎಲೆಯ ಅಂಚಿನಲ್ಲಿ ಮತ್ತು ಮಧ್ಯದ ಭಾಗದಲ್ಲಿ ಬಿಳಿಯ ಪಟ್ಟಿಗಳು ಸತುವಿನ ಕೊರತೆಗೆ ಕಾರಣ ಆಗಿರುತ್ತವೆ. ಈ ಲಕ್ಷಣಗಳು ಹಾವೇರಿ ಜಿಲ್ಲೆಯ ಹಿರೇಕೇರೂರ, ರಾಣೇಬೆನ್ನೂರ, ಬ್ಯಾಡಗಿ ಮತ್ತು ಹಾವೇರಿ ತಾಲ್ಲೂಕಿನಲ್ಲಿ ಕಂಡುಬಂದಿದ್ದು ಬೆಳೆಗೆ 19:19:19 ನೀರಿನಲ್ಲಿ ಕರಗುವ ರಸಗೊಬ್ಬರ (ಪ್ರತಿ ಲೀಟರ್ ನೀರಿಗೆ 5 ಗ್ರಾಂ) ಹಾಗು ಜಿಂಕ್ ಸಲ್ಫೇಟ್ (ಪ್ರತಿ ಲೀಟರ್ ನೀರಿಗೆ 2.5 ಗ್ರಾಂ) ಮಿಶ್ರಣ ಮಾಡಿ ಸಿಂಪರಣೆ ಮಾಡಲು ವಿಜ್ಞಾನಿಗಳು ತಿಳಿಸಿದರು.

## ಪಾರ್ಥೇನಿಯಂ ನಿರ್ಮೂಲನಾ ಸಪ್ತಾಹ

ಆಗಸ್ಟ್ ತಿಂಗಳ 16 ರಿಂದ 22ನೇ ತಾರೀಖಿನವರೆಗೆ ಪಾರ್ಥೇನಿಯಂ ಜಾಗೃತಿ ಸಪ್ತಾಹ ಆಚರಿಸಲಾಯಿತು.




ಕೇಂದ್ರ ಕ್ಷೇತ್ರದಲ್ಲಿ



ಇಟಗಿ



ಅಸುಂಡಿ

## ಪ್ರಥಮ ಹಂತದ ಪ್ರಾತ್ಯಕ್ಷಿಕೆಗಳು

### ನವಣೆಯ ಡಿ.ಎಚ್.ಎಫ್.ಟಿ.-109-3



ಬಸಾಪುರ ಗ್ರಾಮದಲ್ಲಿ ಹದಿನೈದು ರೈತರ ಒಂದು ಎಕರೆಯ ಕ್ಷೇತ್ರದಲ್ಲಿ

### ಹೆಸರು ಬೆಳೆಯಲ್ಲಿ ಡಿ.ಜಿ.ಜಿ.ವಿ - 2



ಇಟಗಿ ಗ್ರಾಮದಲ್ಲಿ ಹತ್ತು ರೈತರಿಗೆ ಪ್ರತಿ ಒಂದು ಎಕರೆಗೆಯಲ್ಲಿ ಪ್ರಾತ್ಯಕ್ಷಿಕೆ

### ಈರುಳ್ಳಿಯ ಅರ್ಕಾಕಲ್ಯಾಣ



ಇಟಗಿ ಮತ್ತು ಅಸುಂಡಿ ಗ್ರಾಮದ 15 ರೈತರಿಗೆ ಒಂದು ಎಕರೆಯಂತೆ

### ಗೈಲ್ಲಾರ್ಡಿಯಾ ಡಿ.ಜಿ.ಎಸ್.-1



ಅಸುಂಡಿ, ಇಟಗಿ ಗ್ರಾಮದ 05 ರೈತರಿಗೆ ಪ್ರತಿ ಒಂದು ಎಕರೆಯಲ್ಲಿ

### ಶಾಲೆಗಲಲ್ಲಿ ಪೌಷ್ಟಿಕ ಕೈತೋಟ



ಕಾಕೋಳ, ಅಸುಂಡಿ, ಮಾಗೋಡ ಹಾಗೂ ಇಟಗಿ ಗ್ರಾಮಗಳ 05 ಶಾಲೆಗಳಲ್ಲಿ

## ಕ್ಷೇತ್ರ ಪರೀಕ್ಷೆಗಳು

### ಮೆಕ್ಕೆ ಜೋಳದಲ್ಲಿ ಲಘುಪೋಷಕಾಂಶಗಳ ನಿರ್ವಹಣೆ



ಸುತ್ತಕೋಟೆ ಗ್ರಾಮ, ರೈತ ಸಂಖ್ಯೆ 02

### ಈರುಳ್ಳಿಯಲ್ಲಿ ಥ್ರಿಪ್ಸ ಮತ್ತು ನೇರಳೆ ಎಲೆ ಮಚ್ಚೆ ರೋಗ ನಿರ್ವಹಣೆ



ಅಸುಂಡಿ ಗ್ರಾಮ, ರೈತ ಸಂಖ್ಯೆ 05

## ಸೂರ್ಯಕಾಂತಿ ಬೆಳೆಯ ಪ್ರಾತ್ಯಕ್ಷಿಕೆ

ಹಾವೇರಿ ತಾಲೂಕಿನ ಬೆಳವಗಿ ಗ್ರಾಮದಲ್ಲಿ ಸೂರ್ಯಕಾಂತಿಯ ಗುಚ್ಚ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಬೇಸಾಯ ಶಾಸ್ತ್ರದ ವಿಜ್ಞಾನಿಯಾದ ಡಾ. ಅಶೋಕ ಪಿ ರವರು ಸೂರ್ಯಕಾಂತಿ ಬೆಳೆಯ ಬಗ್ಗೆ ಸಮಗ್ರ ಬೆಳಯ ಪದ್ಧತಿಗಳು ಮತ್ತು ಬೀಜೋಪಚಾರದ ಬಗ್ಗೆ ರೈತರಿಗೆ ವಿವರವಾಗಿ ತಿಳಿಸಿದರು. ಸಸ್ಯ ರೋಗಶಾಸ್ತ್ರಜ್ಞರಾದ ಡಾ. ಎಸ್. ಎ. ಅಷ್ಟಪುತ್ರೆ ರವರು ಸೂರ್ಯಕಾಂತಿಯ ಬೆಳೆಗೆ ಬರುವ ರೋಗ ಮತ್ತು ಕೀಟಗಳ ನಿರ್ವಹಣೆಗಾಗಿ ರೈತರೊಂದಿಗೆ ಚರ್ಚಿಸಿ ಮನದಟ್ಟು ಮಾಡಿದರು.





ಹಾಲಗಿ, ಬೆಳವಗಿ, ನೀರಲಗಿ, ಯಲವಟ್ಟಿ ಗ್ರಾಮದಲ್ಲಿ ಸುಮಾರು 65 ರೈತರ ಕ್ಷೇತ್ರದಲ್ಲಿ ಡಿ.ಎಸ್. ಎಫ್.ಹೆಚ್–3 & ಕೆ.ಬಿ.ಎಸ್.ಹೆಚ್–53 ತಳಿಯ ಪ್ರಾತ್ಯಕ್ಷಿಕೆ

## ಒಳ ಆವರಣ ತರಬೇತಿ ಕಾರ್ಯಕ್ರಮಗಳು



ದಿನಾಂಕ:11.07.2016 ಈರುಳ್ಳಿ ಹಾಗೂ ಗಲಾಟೆ ಹೂವಿನ ಸಮಗ್ರ ಬೇಸಾಯ ಕ್ರಮಗಳು




ದಿನಾಂಕ:07.09.2016 ಮಣ್ಣು ಮತ್ತು ನೀರು ಸಂರಕ್ಷಣೆ




ದಿನಾಂಕ:29.07.2016 ಗ್ರಾಮೀಣ ಮಹಿಳೆಯರಿಗಾಗಿ ಆದಾಯೋತ್ಪನ್ನ ಚಟುವಟಿಕೆಗಳು

## ಹೊರ ಆವರಣ ತರಬೇತಿ ಕಾರ್ಯಕ್ರಮಗಳು



ದಿನಾಂಕ:13.07.2016, ಗ್ರಾಮ: ಬ್ಯಾಡಗಿ ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಬೇಸಾಯ ಕ್ರಮ



ದಿನಾಂಕ:15.07.2016, ಗ್ರಾಮ: ಕಾಕೋಳ ಶಾಲೆಗಳಲ್ಲಿ ಪೌಷ್ಟಿಕ ಕೈತೋಟ



ದಿನಾಂಕ:20.07.2016, ಗ್ರಾಮ: ಇಟಗಿ ತೋಟಗಾರಿಕೆ ಬೆಳೆಗಳ ಬೇಸಾಯ ಕ್ರಮಗಳು ಮತ್ತು ಅವುಗಳ ಸಸ್ಯ ಸಂರಕ್ಷಣೆ



ದಿನಾಂಕ:22.07.2016, ಗ್ರಾಮ: ಅಸುಂಡಿ ತೋಟಗಾರಿಕೆ ಬೆಳೆಗಳಲ್ಲಿ ಪೋಷಕಾಂಶ ಹಾಗೂ ರೋಗ ನಿರ್ವಹಣೆ



ದಿನಾಂಕ:19.08.2016, ಗ್ರಾಮ: ಕೂನಬೇವು ಸಂಸ್ಕರಣೆ ಹಾಗೂ ಮೌಲ್ಯವರ್ಧನೆ



ದಿನಾಂಕ:29.08.2016, ಗ್ರಾಮ: ಹಿರೇಹಳ್ಳಿಯಲ್ಲಿ ಮೆಣಸಿನಕಾಯಿ ಹಾಗೂ ಶುಂಠಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ

## ಕ್ಷೇತ್ರೋತ್ಸವಗಳು

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿಯ ವತಿಯಿಂದ ರಾಣೇಬೆನ್ನೂರು ತಾಲೂಕಿನ ಇಟಗಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಪರಮೇಶ್ವರಪ್ಪ ಪರ್ವತಪ್ಪ ಮುದ್ದಿ ಇವರ ಕ್ಷೇತ್ರದಲ್ಲಿ ಆಗಸ್ಟ್ 24, 2016 ರಂದು ಹೆಸರು ಬೆಳೆಯ ಡಿ.ಜಿ.ಜಿ.ವ್ವಿ–2 ತಳಿಯ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆ ವಹಿಸಿದ ಮುಖ್ಯಸ್ಥರಾದ ಡಾ. ಸರೋಜನಿ ಜೆ. ಕೆ. ಇವರು ಪೌಷ್ಠಿಕ ಬದ್ರತೆಗಾಗಿ ಹೆಚ್ಚಿನ ಪ್ರದೇಶದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಲು ಸೂಚಿಸಿದರು. ಕೇಂದ್ರದ ಬೇಸಾಯ ತಜ್ಞರಾದ ಡಾ. ಅಶೋಕ ಪಿ. ರವರು ಡಿ.ಜಿ.ಜಿ.ವ್ವಿ–2 ತಳಿಯು ಯಾಂತ್ರೀಕೃತ ಕಟಾವಿಗೆ ಅತೀ ಸೂಕ್ತವಾಗಿದ್ದು, 70–75 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ ಎಂದು ತಿಳಿಸಿದರು. ಶ್ರೀ ಭಾಗವಾನ, ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಣೇಬೆನ್ನೂರು ಹಾಗೂ ಕೇಂದ್ರದ ವಿಜ್ಞಾನಿಗಳು ಕಾರ್ಯಕ್ರಮದಲ್ಲಿ ಉಪನ್ಯಾಸಗಳನ್ನು ನೀಡಿದರು.





## ಈರುಳ್ಳಿ ಬೆಳೆಯ ಅರ್ಕಾಕಲ್ಯಾಣ ತಳಿಯ ಕ್ಷೇತ್ರೋತ್ಸವ



ರಾಣೇಬೆನ್ನೂರು ತಾಲೂಕಿನ ಇಟಗಿ ಗ್ರಾಮದ ಪ್ರಗತಿಪರ ರೈತರಾದ ಶ್ರೀ ಕೃಷ್ಣರೆಡ್ಡಿ ಹನುಮರಡ್ಡೇರ ಇವರ ಕ್ಷೇತ್ರದಲ್ಲಿ ಸೆಪ್ಟೆಂಬರ್ 16, 2016 ರಂದು ಈರುಳ್ಳಿ ಬೆಳೆಯ ಅರ್ಕಾಕಲ್ಯಾಣ ತಳಿಯ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು. ಯುವ ಕೃಷಿಕರಾದ ಶ್ರೀ ಗಣೇಶ ಮುದ್ದಿ, ಇಟಗಿ ಇವರು ಅರ್ಕಾಕಲ್ಯಾಣ ತಳಿ ಸ್ಥಳೀಯ ತಳಿಗಿಂತ ಹೆಚ್ಚಿನ ಉತ್ಪಾದನಾ ಸಾಮರ್ಥ್ಯ ಹೊಂದಿದೆ ಹಾಗೂ ರೋಗನಿರೋಧಕ ಶಕ್ತಿ ಹೊಂದಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ ಪ್ರಕಾಶ ಡಂಬರಮತ್ತೂರು, ಗ್ರಾಮ ಪಂಚಾಯತ್ ಅಧ್ಯಕ್ಷರು, ಇಟಗಿ ಹಾಗೂ ಕೇಂದ್ರದ ವಿಜ್ಞಾನಿಗಳು ಉಪಸ್ಥಿತರಿದ್ದು ಉಪನ್ಯಾಸ ನೀಡಿದರು.



## ಅತ್ಯುತ್ತಮ ಸಂಶೋಧನಾ ಅನುಸಾರಣ ಪ್ರಶಸ್ತಿ



ಅಗಸ್ಟ 17–19 ನೇ ಬೆಂಗಳೂರಿನಲ್ಲಿ ನಡೆದ “Internal conference and exhibition on Best practice in sustainable water, waste water and energy management” SWWEM – 2016 ರಲ್ಲಿ ಕೇಂದ್ರದ ಬೇಸಾಯ ತಜ್ಞರಾದ ಡಾ. ಅಶೋಕ. ಪಿ., “Low cost water saving Techniques in command area” ದ ಪ್ರಬಂಧ ಮಂಡನೆಗಾಗಿ ಅತ್ಯುತ್ತಮ ಸಂಶೋಧನಾ ಅನುಸಾರಣ ಪ್ರಶಸ್ತಿ ಪಡೆದಿರುತ್ತಾರೆ.

## ಯುವ ವಿಜ್ಞಾನಿ ಪ್ರಶಸ್ತಿ



ಸೆಪ್ಟೆಂಬರ್ 10–11, 2016 ಹೈದರಾಬಾದ್ ನಲ್ಲಿ ನಡೆದ National seminar on “Emerging challenges & opportunities in Agriculture, social, plant, environment, co-operatives & technology” ECOASPECT-2016 ರಲ್ಲಿ ಕೇಂದ್ರದ ತೋಟಗಾರಿಕೆ ತಜ್ಞರಾದ ಡಾ. ಯಶಸ್ವಿನಿ ಶರ್ಮಾ, ಇವರು “Propagation studies in Spanish jasmine (Jasminum grandiflorum) by semihardwood cuttings” ಗಾಗಿ “ಯುವ ವಿಜ್ಞಾನಿ” ಹಾಗೂ ಉತ್ತಮ ಪ್ರಬಂಧ ಮಂಡನೆ ಪ್ರಶಸ್ತಿ ಪಡೆದಿರುತ್ತಾರೆ.


| | | |
|---|---|---|
| ಸಂಪಾದಕರು ಹಾಗೂ ಪ್ರಕಾಶಕರು | : | ಡಾ. ಸರೋಜನಿ ಜೆ. ಕರಕಣ್ಣವರ<br>ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ–581115 |
| ಸಹ ಸಂಪಾದಕರು | : | ಡಾ. ಯಶಸ್ವಿನಿ ಶರ್ಮಾ |
| | : | ಶ್ರೀ. ಡಿ. ಎಸ್. ಮಲ್ಲಿಕಾರ್ಜುನಪ್ಪ ಗೌಡ, ಡಾ. ಎಸ್. ಎ. ಅಷ್ಟಪುತ್ರೆ, ಶ್ರೀಮತಿ ಗೀತಾ ತಾಮಗಳೆ ಮತ್ತು ಡಾ. ಅಶೋಕ ಪಿ. |
| ಅಕ್ಷರ ಜೋಡಣೆ ಮತ್ತು ವಿನ್ಯಾಸ | : | ಕು. ರೇಖಾ ಕೆ. ಎನ್. |



ಇಂದ,

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ
ಹನುಮನಮಟ್ಟಿ –581115 ಜಿ: ಹಾವೇರಿ
ದೂರವಾಣಿ : 08373–253524
ಮಿಂಚಂಚೆ : kvk_haveri@rediffmail.com
ವೆಬ್‌ಸೈಟ್ : www.kvkhaveri.org


ಗೆ, ______________________

______________________

______________________

______________________

ತೆರೆದ ಅಂಚೆ